**ಸಿ.ಸಿ.ನಂ.191/2019.**

**ಪಿ.ಡಬ್ಲ್ಯು:1, ಸಿ.ಡಬ್ಲ್ಯೂ:1**

ದಿನಾಂಕ:13.12.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಒ.ವೈ ವಕೀಲರಿಂದಃ-**

ನಾನು 2012-13 ನೇ ಸಾಲಿನಲ್ಲಿ ಗಿರಿಯಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ನಾನು ಮತ್ತು ಆರೋಪಿ ತುಂಬಾ ವರ್ಷಗಳಿಂದ ಸ್ನೇಹಿತರು ಎಂದರೆ ಸರಿ. ನಾನು ಮತ್ತು ಆರೋಪಿ ಒಟ್ಟಿಗೆ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದ ಸಮಯದಲ್ಲಿ ಆರೋಪಿಯು ನಮ್ಮ ಗ್ರಾಮ ಪಂಚಾಯ್ತಿಯ ನರೇಗ ಯೋಜನೆಯಡಿ ಕೆಲಸ ಮಾಡಿದ್ದಾರೆಂದರೆ ಸರಿ. ಆರೋಪಿಗೆ ಬ್ಯಾಂಕ್ ಖಾತೆಯನ್ನು ನಾನೇ ಹೋಗಿ ತೆರೆದಿರುತ್ತೇನೆಂದರೆ ಸಾಕ್ಷಿಯು ಪರಿಚಯದವರು ಬೇಕಿತ್ತು ಎಂದು ಕೇಳಿದ್ದಕ್ಕೆ ನಾನು ಆರೋಪಿಗೆ ಪರಿಚಯದವನಾಗಿ ನಾನು ಆರೋಪಿಗೆ ಬ್ಯಾಂಕ್ ಖಾತೆ ತೆರೆಯಲು ನಾನು ಸಹಿಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಅಧ್ಯಕ್ಷನಾಗಿರುವ ಕಾರಣ ನನ್ನ ಹೆಸರಿನಲ್ಲಿ ಕೆಲಸ ಮಾಡಿಸಲು ಆಗದ ಕಾರಣ ಆರೋಪಿ ಹೆಸರನಲ್ಲಿ ಕೆಲಸ ಮಾಡಿಸಿ ಬಿಲ್ ನನ್ನ ನಾನು ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಪಂಚಾಯ್ತಿಯ ವತಿಯಿಂದ ಎಷ್ಟು ಕೆಲಸ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲ. ಆರೋಪಿಗೆ 1,80,000/- ರೂ. ಗಳನ್ನು ಚೆಕ್ ಮೂಲಕ ನೀಡಿರುತ್ತೇನೆ ಮತ್ತು 20,000/- ರೂಗಳನ್ನು ನಗದಾಗಿ ನೀಡಿರುತ್ತೇನೆ. ಆರೋಪಿಗೆ ಚೆಕ್ ನೀಡಿದ ದಿನವೇ ನಗದು ಹಣವನ್ನು ನೀಡಿರುತ್ತೇನೆ. ಆರೋಪಿಗೆ ಹಣ ನೀಡಿದ ದಿನವೇ ನಿಪಿ-1 ಚೆಕ್ ನ್ನು ನೀಡಿದ್ದಾರೆಂದರೆ ಸರಿ. ನಂತರ ನಿಪಿ-1 ಚೆಕ್ ನ್ನು ನಗದೀಕರಣಕ್ಕಾಗಿ ಸಿಂಡಿಕೇಟ್ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ಮೊದಲ ಬಾರಿ ದಿ:16-06-2017 ರಂದು ಹಾಜರುಪಡಿಸಿದಾಗ ಆರೋಪಿ ಖಾತೆಯಲ್ಲಿ ಹಣವಿಲ್ಲ ಎಂದು ವಾಪಸ್ಸಾಗಿರುತ್ತದೆ. 2 ನೇ ಬಾರಿ ಎರಡು ತಿಂಗಳ ನಂತರ ಚೆಕ್ ನ್ನು ಹಾಜರುಪಡಿಸಿದಾಗ

ಖಾತೆಯನ್ನು ಮುಚ್ಚಲಾಗಿದೆ ಎಂದು ಚೆಕ್ ನ್ನು ಹಿಂದಿರುಗಿಸಿರುತ್ತಾರೆ. ಚೆಕ್ ವಾಪಸ್ಸಾದ ಸುಮಾರು 20 ದಿನಗಳ ನಂತರ ಆರೋಪಿಗೆ ನೋಟೀಸ್ ನೀಡಿರುತ್ತೇನೆ. ಚೆಕ್ ಅಮಾನ್ಯವಾದ ನಂತರ ಈ ಪ್ರಕರಣ ದಾಖಲಾಗುವವ ವರೆಗೆ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ದಿಃ18-08-2018 ರಂದು ಆರೋಪಿಯ ಖಾತೆಯ ಚೆಕ್ ನ್ನು ಪಡೆದುಕೊಂಡು ರೂ. 1,25,000/- ಹಣವನ್ನು ನಾನು ಆರೋಪಿಯಿಂದ  ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನಂತರ ಆರೋಪಿಯು ರೂ.75,000/-ಗಳನ್ನು ನಗದಾಗಿ ನನಗೆ ಪಾವತಿ ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಸ್ನೇಹಿತರಾಗಿದ್ದ ಕಾರಣ ಆರೋಪಿಯ ಹಣವನ್ನು ಹಿಂದಿರುಗಿಸಿದ್ದರೂ ಸಹ ನಿಪಿ-1 ಚೆಕ್ ನ್ನು ಹಿಂದಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನೋಟೀಸ್ ನೀಡಿದ ನಂತರ ಆರೋಪಿಗೆ ನಿನ್ನಂದ ಬರಬೇಕಾದ  ಹಣ ಸಂಪೂರ್ಣ ವಾಪಸ್ಸು ಬಂದಿದ್ದು ಪ್ರಕರಣ ದಾಖಲು ಮಾಡುವುದಿಲ್ಲ ಎಂದು ಆರೋಪಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ.

ನಾನು ಅಧ್ಯಕ್ಷನಾಗಿದ್ದ ಒಂದು ವರ್ಷದ ಅವದಿಯಲ್ಲಿ ಮಾತ್ರ ಆರೋಪಿಯು ನೀಡಿದ ನಿಪಿ-1 ಚೆಕ್ ನ ಖಾತೆ  ಚಾಲ್ತಿಯಲ್ಲಿತ್ತು ನಂತರ ಮುಚ್ಚಲಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ಖಾತೆ ವ್ಯವಹಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಪಿ-1 ಚೆಕ್ ನ್ನು ನನಗೆ ನೀಡಿದ ನಂತರ ಆರೋಪಿಯು ದಿಃ18-08-2018 ರಂದು ರೂ.1,25,000/- ಹಣವನ್ನು ಚೆಕ್ ನ ಮೂಲಕ ನನಗೆ ನೀಡಿದ್ದು ಮತ್ತು ದಿಃ25-08-2018 75,000/-ಹಣವನ್ನು ನಗದಾಗಿ ನನಗೆ ನೀಡಿದ್ದರು ಸಹ ನಿಪಿ-1 ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರರೆ ಸರಿಯಲ್ಲ. ದಿಃ18-08-2018 ರಂದು ರೂ.1,25,000/- ಹಣ ನನ್ನ ಹೆಸರಿಗೆ ಚೆಕ್ ಮೂಲಕ ಬಂದ ನಂತರವೂ ಸಹ ಆರೋಪಿಯ ಖಾತೆಯಲ್ಲಿ 1,17,004/- ಹಣ ಉಳಿದಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ದಾಖಲೆಯನ್ನು ಸೃಷ್ಟಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ನಿಪಿ-1 ಚಕ್ ನ್ನು ನೀಡಿದ ಖಾತೆಯನ್ನು ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ವ್ಯವಹಾರಕ್ಕಾಗಿ  ಮಾತ್ರ ಆರೋಪಿಯ ಹೆಸರಿನಲ್ಲಿ ಖಾತೆಯನ್ನು ತೆರೆದಿದ್ದು ನನ್ನ ಅಧ್ಯಕ್ಷ

ಅವದಿ ಮುಗಿದ ನಂತರ ಮುಚ್ಚಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು 2013-14 ರಲ್ಲಿ ಅಧ್ಯಕ್ಷನಾಗಿದ್ದು ಆರೋಪಿಯ ಖಾತೆಯನ್ನು 2016 ರಲ್ಲಿ ಮುಚ್ಚಲಾಗಿದೆ ಎಂದು ನುಡಿಯುತ್ತಾರೆ. ಯಾರಾದರೂ ನನಗೆ ಚೆಕ್ ನ್ನು ನೀಡಿದರೆ ನಗದೀಕರಣಕ್ಕಾಗಿ ಚೆಕ್ ನ ಹಿಂಬಾಗದಲ್ಲಿ ಸಹಿಯನ್ನು ಮಾಡಿ ಬ್ಯಾಂಕ್ ಗೆ ಹಾಜರುಮಾಡಿ ಹಣ ನಗದೀಕರಣ ಮಾಡಬೇಕೆಂದರೆ ಸರಿ.

ನಾನು ಆರೋಪಿಗೆ ನೋಟೀಸ್ ನೀಡಿದ ನಂತರ ಆರೋಪಿ ನನ್ನ ಬಳಿ ಬಂದಿದ್ದು ನಾನು ನಿಪಿ-1 ನ ಚೆಕ್ ನ ಬಾಬ್ತು ಎಲ್ಲಾ ಹಣ ವಾಪಸ್ಸು ಬಂದಿದ್ದು ನಾನು ಪ್ರಕರಣವನ್ನು ದಾಖಲು ಮಾಡುವುದಿಲ್ಲ ನೋಟೀಸ್ ಗೆ ಉತ್ತರ ಕೊಡಬೇಡಿ ಎಂದು ಹೇಳಿದ ಕಾರಣ ಆರೋಪಿಯ ನೋಟೀಸ್ ಗೆ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಇಂದಿಗೂ ಸಹ ಮಾತನಾಡುತ್ತೇವೆ. ಆರೋಪಿಯು ನನಗೆ ನೀಡಬೇಕಾದ ಸಂಪೂರ್ಣ ಹಣವನ್ನು ಮರುಪಾವತಿ ಮಾಡಿದ್ದರೂ ಸಹ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ನಿಪಿ-1 ಚೆಕ್ ನ್ನು ದುರುಪಯೋಗಪಡಿಸಿಕೊಂಡು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ಚೆಕ್ ನ ಹಿಂಬಾಗದಲ್ಲಿ ಆರೋಪಿಯ ಸಹಿ ಇರುವುದಿಲ್ಲ ಎಂದರೆ ಸರಿ. ದಿಃ18-08-2018 ರಂದು ಆರೋಪಿಯಿಂದ ಹಣ ಪಡೆದುಕೊಂಡಿರುವ ವಿಚಾರವನ್ನು ನಾನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಯಾವುದೇ ಹಣ ಪಡೆದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನಗೆ ಯಾವುದೇ ಹಣ ಕೊಡಬೇಕಿಲ್ಲದಿದ್ದರೂ ಸಹ ನಾನು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.